# ನಮ್ಮೂರೇ ನಮಗೆ ಅಪರಿಚಿತವಾಗುವತ್ತ...

ಎಲ್ಲೋ ದೂರದಲ್ಲಿರುವವರನ್ನು ಹತ್ತಿರಕ್ಕೆ ತರುವ ಸಾಮಾಜಿಕ ಜಾಲತಾಣಗಳು ನಮ್ಮೂರೇ ನಮಗೆ ಅಪರಿಚಿತವಾಗುವ ವಿರೋಧಾಭಾಸಕ್ಕೂ ಸಾಕ್ಷ್ಯವಾಗುತ್ತಿವೆ.

■ ಶ್ರೀರಂಜನಿ ಅಡಿಗ

ಈ ಸಾಮಾಜಿಕ ಮಾಧ್ಯಮಗಳ ಪ್ರಭಾವ ನಮ್ಮ ಮೇಲೆ ಹೇಗೆ, ಎಲ್ಲಿ, ಯಾವಾಗ ಆಗುತ್ತದೆ ಎಂಬುದು ಊಹಿಸಿಕೊಳ್ಳುವುದು ಬಲುಕಷ್ಟ ಹಾಗೂ ಅಷ್ಟೇ ನಿಗೂಢ! ಅದು ಒಳ್ಳೆಯದೂ ಆಗಿದ್ದಿರಬಹುದು ಕೆಟ್ಟದೂ ಆಗಿದ್ದಿರಬಹುದು. ಎಲ್ಲೋ ಕಳೆದುಹೋದ ವೃದ್ಧರು ಜಾಲತಾಣಗಳ ಮೂಲಕ ಸಿಕ್ಕುವುದು, ಯಾರದ್ದೋ ಮನೆಯ ಅನಾರೋಗ್ಯಪೀಡಿತ ಮಗುವಿಗೆ ಎಲ್ಲಿಂದಲೋ ಸಹಾಯಹಸ್ತ ದೊರಕುವುದು ಒಂದು ಬದಿಯಲ್ಲಾದರೆ, ಡಿಜಿಟಲ್ ಅರೆಸ್ಟ್ ಖೆಡ್ಡಾಕ್ಕೆ ಬೀಳುತ್ತಿರುವವರ ಸಂಖ್ಯೆ ಲೆಕ್ಕವಿಲ್ಲದಷ್ಟು! ಡಿಜಿಟಲ್ ಲೋಕದ ಇಂಥ ನೇರ ಪರಿಣಾಮ ಬಿಟ್ಟು ಅನುಷಂಗಿಕವಾಗಿ, ಸಾಪೇಕ್ಷವಾಗಿ ಮತ್ತೊಂದು ಪ್ರಭಾವವನ್ನು ಜಾಲತಾಣಗಳು ಹುಟ್ಟಿಸುತ್ತಿವೆ. ಅದು ಈಗಾಗಲೇ ನಿಮ್ಮ ಗಮನಕ್ಕೂ ಬಂದಿರಬಹುದು.

ರಜಾದಿನಗಳು, ಲಾಂಗ್‌ವೀಕೆಂಡ್ ಬಂದಾಗೆಲ್ಲ ಪತಿಯ ಸಹೋದ್ಯೋಗಿಗಳು ಕರೆ ಮಾಡುತ್ತಾರೆ. ಮೊದಲೆಲ್ಲ 'ನಿಮ್ಮೂರಲ್ಲಿ ನೋಡೋಕೆ ಏನೇನಿದೆ? ಒಂದು ಹೋಟೆಲ್ ಬುಕ್ ಮಾಡು; ದೇವಸ್ಥಾನ ಯಾವುದೆಲ್ಲ ಇದೆ? ಯಾವ ಹೊತ್ತಿಗೆ ತೆರೆದಿರುತ್ತದೆ? ಊಟ ಅಲ್ಲೇ ಮಾಡಬಹುದಾ?' ಅಂತೆಲ್ಲ ಕೇಳುತ್ತಿದ್ದರು. ಆಗೆಲ್ಲ 'ನಮ್ಮೂರಿಗೆ ನಾನೇ ರಾಜ' ಎಂದು ನನ್ನವರು ಅವರಿಗೆ ಬೇಕಾದ ಮಾಹಿತಿ ನೀಡುತ್ತಿದ್ದರು. ಆದರೆ ಈಗೀಗ ಬರುವ ಫೋನು ಕರೆಗಳಲ್ಲಿನ ಆಶಯ ಬದಲಾಗಿದೆ. 'ನಿಮ್ಮೂರ ಕಡೆ ಹೊರಟಿದ್ದೇವೆ. ಅಲ್ಲಿ ಒಂದು ಬೀಚ್ ರೆಸಾರ್ಟ್ ಇದೆಯಂತಲ್ಲ? ಹೇಗದು? ಸರ್ವಿಸ್ ಹೇಗಿದೆ? ಆ ಹೋಂ ಸ್ಟೇಯಲ್ಲಿ ನಿಯರೆಸ್ಟ್ ವಾಟರ್‌ಪಾರ್ಕ್ ಇದೆಯಲ್ಲ? ಅದು ಎಷ್ಟರಮಟ್ಟಿಗೆ ಸೇಫ್? ಎಂದೆಲ್ಲಾ ಕೇಳುತ್ತಾರೆ!

ಮಗು ಎಷ್ಟು ಬೆಳೆದರೂ ತಾಯಿಗೆ ಮಗುವಾಗಿರುವಂತೆ ತನ್ನ ಊರು ಕೂಡ ಹಾಗೆಯೇ ಇದೆಯೆಂದು ಭಾವಿಸಿದ್ದಂತಿದೆ ನನ್ನ ಪತಿ. ಇಷ್ಟೊಂದು ಆಧುನಿಕವಾಗಿ, ವ್ಯಾವಹಾರಿಕವಾಗಿ ಸ್ಥಿತ್ಯಂತರಗೊಂಡಿದೆ ಎಂದು ತಿಳಿದೇ ಆಘಾತಕ್ಕೊಳಗಾಗುತ್ತಾರೆ. ಸ್ನೇಹಿತರಿಗೇ 'ಹೌದೇ? ಹಾಗೊಂದು ಜಾಗ ನಮ್ಮೂರಿನಲ್ಲಿದೆಯೇ?' ಎಂದು ಅವರಿಗೇ ಮರುಪ್ರಶ್ನೆ ಎಸೆದು ಅವರನ್ನೇ ಕಕ್ಕಾಬಿಕ್ಕಿಯನ್ನಾಗಿಸುತ್ತಾರೆ.

ಇನ್ನು ಫುಡ್‌ವ್ಲಾಗುಗಳ ಹಾವಳಿಯಿಂದ ನಮಗಾಗುವ ಮುಜುಗರ ಒಂದೆರಡಲ್ಲ! 'ನಿಮ್ಮೂರಲ್ಲೊಬ್ಬರು ಮನೆಯಲ್ಲಿಯೇ ಮಸಾಲೆದೋಸೆ ಮಾಡುತ್ತಾರಂತೆ; ಚೆನ್ನಾಗಿರುತ್ತಾ? ಗೂಗಲ್ಲಿನಲ್ಲಿ 4.5 ರೇಟಿಂಗ್ ಇದೆ. ಅಲ್ಲೊಂದು ಸಣ್ಣ ಅಂಗಡಿಯಲ್ಲಿ ಸಿಗುವ ಮುಂಡಕ್ಕಿ ಉಪ್ಕರಿಗೆ ಸಪರೇಟ್ ಫ್ಯಾನ್‌ಬೇಸ್ ಇದೆಯಂತೆ! ಕೊಟ್ಟೆಕಡುಬು ಹಾಗೂ ಮೂಡೆಯನ್ನು ದೇವಸ್ಥಾನದ ಬಳಿಯ ಒಬ್ಬರು ಮಾಡುತ್ತಾರಂತೆ, ಬೆಳಿಗ್ಗೆ ಮಾತ್ರ ತೆಗೆದಿರುತ್ತಾರಂತೆ? ಕೃಷ್ಣಮಠದ ಸರೌಂಡಿಂಗಿನಲ್ಲಿ ಗೋಳಿಬಜೆ ಫೇಮಸ್ ಅಂತೆ. ತೆಂಗಿನೆಣ್ಣೆಯಲ್ಲಿ ಕರಿಯುವುದರಿಂದ ಅತೆಂಟಿಕ್ ಟೇಸ್ಟ್ ಅನ್ನುತ್ತಾನೆ ವ್ಲಾಗರು. ಹೌದಾ? ಎಂದೆಲ್ಲಾ ಕೇಳಿ ನಮ್ಮನ್ನು ಅಡಕತ್ತರಿಯಲ್ಲಿ ಸಿಕ್ಕಿಸುತ್ತಾರೆ.



ಊರಿನಲ್ಲಿರುವ ಇಂಥ ಕೆಲವು ಪುಟ್ಟಪುಟ್ಟ ಜಾಗಗಳು ನಮಗೆ ಮಾತ್ರವಲ್ಲ ಊರಿನಲ್ಲಿರುವವವರಿಗೇ ಕೆಲವೊಮ್ಮೆ ತಿಳಿದಿರುವುದಿಲ್ಲ. ಅದಕ್ಕೆ 'ಅಲ್ಲಿ ಮಾಡುವುದಕ್ಕಿಂತ ನನ್ನಮ್ಮ ಚೆನ್ನಾಗಿ ಮಾಡುತ್ತಾರೆ. ನಮ್ಮನೆಗೇ ಬರಬಹುದು ಎಂದು ಮನೆಗೆ ಆಹ್ವಾನಿಸಿದ್ದೆ. (ಕೊನೆಗೂ ಅವರು ಅಲ್ಲಿಗೆ ಹೋಗಿ ಆಸೆ ಪೂರೈಸಿಕೊಂಡೇ ತಮ್ಮೂರಿಗೆ ವಾಪಸಾಗಿದ್ದರು ಅನ್ನಿ) ಜಾಲತಾಣಗಳ ಮೂಲಕ ಹೆಸರುವಾಸಿಯಾದ ಸಣ್ಣ ಹೋಟೆಲ್ಲೊಂದರ ಬಗ್ಗೆ ನನ್ನ ಅಣ್ಣ 'ಆ ಹೋಟೆಲ್ಲಿಗೆ ಊರಿನವರು ಯಾರೂ ಹೋಗುವುದಿಲ್ಲ, ಮೊಬೈಲಿನಲ್ಲಿ ನೋಡಿಕೊಂಡು ಪ್ರವಾಸಿಗರೇ ಜಾಸ್ತಿ ಬರುವುದು. ಮಾಲೀಕರು ಊರಿನವರು ಹೋದರೆ ಮಾತನಾಡಿಸುವುದೂ ಇಲ್ಲ ಎಂದು ಜಾತಕ ಹೇಳಿದ್ದ.

ಇದು ಊರಿನ ಕತೆಯಾದರೆ, ಊರಿನಿಂದ ಬೆಂಗಳೂರಿಗೆ ಬರುವವರು 'ಅವೆನ್ಯೂ ರೋಡಿನಲ್ಲಿ ಸಿಲ್ವರ್ ಆರ್ಟಿಕಲ್ಲುಗಳು ಅಗ್ಗಿಯಂತೆ, ಯಾವ ಅಂಗಡಿ ಎಂದು ಗೊತ್ತೇ? ಅಲ್ಲೇ ಪಕ್ಕದಲ್ಲಿ ಗೋಲ್ಡ್‌ಪ್ಲೇಟೆಡ್ ಜುವೆಲ್ಲರಿ ಅಂಗಡಿಯೂ ಇದೆ. ರೇಷ್ಮೆಸೀರೆಗೆ ಚಿಕ್ಕಪೇಟೆಯಲ್ಲಿ ಈ ಅಂಗಡಿಯಿದೆ; ಮೆಜೆಸ್ಟಿಕ್ಕಿನಲ್ಲಿ ಹೋಲ್‌ಸೇಲ್ ರೇಟಿನಲ್ಲಿ ಹಾಕಿಕೊಡುವ ಅಂಗಡಿಯಿದೆ. ಕರೆದುಕೊಂಡು ಹೋಗಬಹುದಾ? ಎಂದೆಲ್ಲ ಕೇಳುತ್ತಲೇ ಇರುತ್ತಾರೆ.

ಶಾಪಿಂಗಿಗೂ ನನಗೂ ಆಗಿಬರದೇ ಇರುವಾಗ ಹಾಗೂ ಬೇಕಾದ್ದನ್ನು ಮನೆ ಹತ್ತಿರದ ಅಂಗಡಿಯಲ್ಲಿ ಕೊಳ್ಳುವ ನನಗೆ ದೇವರಾಣೆ ಅಂಥದ್ದೆಲ್ಲ ಅಂಗಡಿಗಳು ಇರುತ್ತವೆಯೆಂದೇ ಗೊತ್ತಿರುವುದಿಲ್ಲ. ಒಟ್ಟಿನಲ್ಲಿ ಈ ಸಾಮಾಜಿಕ ಜಾಲತಾಣಗಳಿಂದ ಅಲ್ಲೂ ಇಲ್ಲ, ಇಲ್ಲೂ ಇಲ್ಲ ಎನ್ನುವಂತೆ ತ್ರಿಶಂಕುಸ್ಥಿತಿಯಲ್ಲಿ—ನಾವಿದ್ದ ಜನ್ಮಭೂಮಿ, ನಾವಿರುವ ಕರ್ಮಭೂಮಿ—ಅಪರಿಚಿತವಾಗುತ್ತಲೇ ಹೋಗುತ್ತಿದೆ. ನಿಮಗೂ ಈ ಅನುಭವ ಆಗಿದೆಯೇ?

ಪ್ರತಿಕ್ರಿಯಿಸಿ: feedback@sudha.co.in